# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **53** |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ. ಎಲ್. ಅನಿಲ್ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15/07/2024 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು ಮತ್ತು ಸಿಬ್ಬಂದಿಗಳ ಸಂಪೂರ್ಣ ಮಾಹಿತಿ ನೀಡುವುದು; | ಕೋಲಾರ ಜಿಲ್ಲೆಯಲ್ಲಿ 66 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, ಇವುಗಳಲ್ಲಿ ಒಟ್ಟು 395 ಸಂಖ್ಯೆಯ ವೈದ್ಯರು, ಅರೆ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. **(ಹುದ್ದೆಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ).** ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಯಾವುದೇ ವೈದ್ಯ/ಸಿಬ್ಬಂದಿಗಳು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ.<br><br>ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 57 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, ಇವುಗಳಲ್ಲಿ ಒಟ್ಟು 310 ಖಾಯಂ, 12 ಗುತ್ತಿಗೆ, 96 ಎನ್.ಹೆಚ್.ಎಂ., ಹಾಗೂ 112 ಹೊರಗುತ್ತಿಗೆ ಆಧಾರದಡಿ ವೈದ್ಯರು, ಅರೆ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. **(ಹುದ್ದೆಗಳ ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ).** ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 04 ಅರೆ ವೈದ್ಯಕೀಯ/ಸಿಬ್ಬಂದಿಗಳು ನಿಯೋಝನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ವಿವರ ಈ ಕೆಳಗಿನಂತಿದೆ.-<br>1. ಶ್ರೀಮತಿ ಜಯಲಕ್ಷ್ಮಿ ಡಿ. ಬಿ., ಶುಶ್ರುಷಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಗೌರಿಬಿದನೂರು – ನಿಯೋಜನೆ – ನಿರ್ಭಯ ಕೇಂದ್ರ, ಬೆಂಗಳೂರು.<br>2. ಶ್ರೀ ಚಂದ್ರಶೇಖರ್, ಆರೋಗ್ಯ ನಿರೀಕ್ಷಣಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ದಿಬ್ಬೂರು-ನಿಯೋಜನೆ-ಬಿ.ಬಿ.ಎಂ.ಪಿ., ಬೆಂಗಳೂರು.<br>3. ಶ್ರೀ ನೀಲಕಂಠಯ್ಯ ಅ. ಹಿರೇಮಠ, ಪ್ರಥಮ ದರ್ಜೆನ ಸಹಾಯಕ, ಪ್ರಾಥಮಿಕ ಆರೋಗ್ಯ ಕೇಂದ್ರ, ನಂದಿ-ನಿಯೋಜನೆ-ಮಾನಸಿಕ ಆರೋಗ್ಯ ವಿಮರ್ಶಾ ಮಂಡಳಿ, ಬೆಂಗಳೂರು.<br>4. ಶ್ರೀ ದಿನೇಶ್ ರಾವ್, ವಾಹನ ಚಾಲಕರು, ಪ್ರಾಥಮಿಕ ಆರೋಗ್ಯ ಕೇಂದ್ರ, ನಗರಗೆರೆ-ನಿಯೋಜನೆ – ಕೃಷಿ ಇಲಾಖೆ, ಚಿಕ್ಕಬಳ್ಳಾಪುರ. |
| ಆ) | ಸದರಿ ಜಿಲ್ಲೆಗಳಲ್ಲಿರುವ ತಾಲ್ಲೂಕು ಆಸ್ಪತ್ರೆಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವಿವಿಧ ದರ್ಜೆಯ ಹುದ್ದೆಗಳನ್ನು ತ್ವರಿತಗತಿಯಲ್ಲಿ ನೇಮಕಾತಿಗೊಳಿಸಲು ಸರ್ಕಾರದ ಸಕಾಲಿಕ ಕ್ರಮಗಳು ಯಾವುವು; (ಸಂಪೂರ್ಣವಾದ ಮಾಹಿತಿ ನೀಡುವುದು) | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞ ವೈದ್ಯರು/ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳ ಭರ್ತಿಗೆ ಕೈಗೊಂಡಿರುವ ಕ್ರಮ ಈ ಕೆಳಗಿನಂತಿದೆ.-<br>1. ಸರ್ಕಾರದ ಪತ್ರ ಸಂಖ್ಯೆ : ಆಕುಕ 453 ಹೆಚ್ಎಸ್ಹೆಚ್ 2022, ದಿನಾಂಕ : 13/12/2022ರಲ್ಲಿ ರಾಜ್ಯದಲ್ಲಿ ಇತರೆ ಜಿಲ್ಲೆಗಳಲ್ಲಿನ ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿಯಿರುವ ತಜ್ಞ ವೈದ್ಯರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶಗಳಡಿ ಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳ ಹಂತದಲ್ಲಿ ನಿಯಮಾನುಸಾರ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br>2. ಸರ್ಕಾರದ ಆದೇಶ ಸಂಖ್ಯೆ : ಆಕುಕ 619 ಹೆಚ್ಎಸ್ಹೆಚ್ 2022, ದಿನಾಂಕ : 17/01/2024 ಮತ್ತು ಸೇರ್ಪಡೆ ಆದೇಶ ದಿನಾಂಕ : ರಲ್ಲಿ 337 ತಜ್ಞ ವೈದ್ಯರು ಮತ್ತು 250 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದಡಿ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br>3. ಒಂದು ವರ್ಷದ ಕಡ್ಡಾಯ ಸೇವೆಗಾಗಿ ಬರುವ ವೈದ್ಯ ಅಭ್ಯರ್ಥಿ/ತಜ್ಞ ವೈದ್ಯ ಅಭ್ಯರ್ಥಿಗಳನ್ನು ವೈದ್ಯರ/ತಜ್ಞರ ಹುದ್ದೆಗಳಿಗೆ ಭರ್ತಿ ಮಾಡಲು |
| ಇ) | ಸರ್ಕಾರಿ ವ್ಯಾಪ್ತಿಯ ಆರೋಗ್ಯ ಸೇವೆಯನ್ನು ಗ್ರಾಮೀಣರು ಹೆಚ್ಚಿನ ಪ್ರಮಾಣದಲ್ಲಿ ಅವಲಂಬಿಸಿರುವುದರಿಂದ ಆದ್ಯತೆಯ ಮೇರೆಗೆ ಸಿಬ್ಬಂದಿ ವರ್ಗ ಮತ್ತು ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸಿಕೊಟ್ಟು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರವು ಯಾವ ಕ್ರಮ ಕೈಗೊಳ್ಳಲಿದೆ; | |

<table>
<tr>
<td></td>
<td></td>
<td>
ಅವಕಾಶ ಕಲ್ಪಿಸಲಾಗಿದೆ.
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಈ ಕೆಳಕಂಡ ಅರೆ ವೈದ್ಯಕೀಯ ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡುವ ಬಗ್ಗೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಪ್ರಸ್ತುತ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯಲ್ಲಿದೆ.-
<table>
<tr><th>ಕ್ರ. ಸಂ.</th><th>ಪದನಾಮ</th><th>ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಫಾರ್ಮಸಿ ಅಧಿಕಾರಿ</td><td>400</td></tr>
<tr><td>2</td><td>ಕಿರಿಯ ವೈದ್ಯಾಧಿಕಾರಿ,<br>ಪ್ರಯೋಗಶಲಾ ತಾಂತ್ರಿಕ ಅಧಿಕಾರಿ</td><td>150</td></tr>
<tr><td>3</td><td>ವಿಕಿರಣ ಶಾಸ್ತ್ರ, ಚಿತ್ರಣ ಅಧಿಕಾರಿ</td><td>08</td></tr>
<tr><td></td><td>ಒಟ್ಟು</td><td>558</td></tr>
</table>
ಸರ್ಕಾರದ ಪತ್ರ ಸಂಖ್ಯೆ : ಆಕುಕ 103 ಹೆಚ್‌ಎಸ್‌ಎಂ 2019, ದಿನಾಂಕ : 03/02/2024ರಲ್ಲಿ ಇಲಾಖೆಯಲ್ಲಿ ಖಾಲಿ ಇರುವ 200 ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಹಾಗೂ 400 ಫಾರ್ಮಸಿ ಅಧಿಕಾರಿಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡುವವರೆಗೆ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ.
ಇಲಾಖೆಯಲ್ಲಿ ಖಾಲಿ ಆಗುವ ಹುದ್ದೆಗಳನ್ನು ಕಾಲಕಾಲಕ್ಕೆ ನೇರ ನೇಮಕಾತಿ, ಮುಂಬಡ್ತಿ, ಗುತ್ತಿಗೆ ನೇಮಕಾತಿ, ಕಡ್ಡಾಯ ಸೇವೆಯಡಿ ಭರ್ತಿ ಮಾಡಲಾಗುತ್ತಿದೆ.
ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ ಪ್ರತಿ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನಕ್ಕೆ ಜಿಲ್ಲಾ ಕೇಂದ್ರಗಳಿಂದ ಕೋರಲಾಗುವ ಪ್ರಸ್ತಾವನೆಗಳಿಗೆ ಆದ್ಯತೆ ಮೇರೆಗೆ ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೂಲಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ.
</td>
</tr>
<tr>
<td>ಈ)</td>
<td>ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದ್ದು, ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಗುಣಮಟ್ಟದ ಮತ್ತು ಸುವ್ಯವಸ್ಥಿತ ಆರೋಗ್ಯ ಸೇವಾ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಮತ್ತು ಕ್ರಮಗಳು ಯಾವುವು? (ಸಂಪೂರ್ಣವಾದ ಮಾಹಿತಿ ನೀಡುವುದು).</td>
<td>
ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳು ಒಟ್ಟಾರೆಯಾಗಿ 51 ತಾಲ್ಲೂಕುಗಳಲ್ಲಿ ಅನುಮೋದನೆ ದೊರೆತಿದ್ದು, ಅದರಲ್ಲಿ 25 ತಾಲ್ಲೂಕುಗಳಲ್ಲಿ ಕಾರ್ಯಾರಂಭಿಸಲಾಗಿದೆ. ಇನ್ನುಳಿದ 26 ಕಟ್ಟಡ ಕಾಮಗಾರಿಯಲ್ಲಿರುತ್ತದೆ. ಇದರಿಂದ ಗರ್ಭಿಣಿ ಮತ್ತು ಬಾಣಂತಿಯರಿಗೆ ಆರೈಕೆ ನೀಡಲಾಗುತ್ತಿದೆ. ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದ್ದು, ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಗುಣಮಟ್ಟದ ಸುವ್ಯವಸ್ಥಿತ ಆರೋಗ್ಯ ಸೇವಾ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರದಿಂದ ನಡೆಸುತ್ತಿರುವ ಕಾರ್ಯಕ್ರಮಗಳು ಈ ಕೆಳಗಿನಂತಿದೆ.-
<ol>
<li>ಜನನ ಸುರಕ್ಷಾ ಯೋಜನೆ;</li>
<li>ಜನನಿ ಶಿಶು ಸುರಕ್ಷಾ ಕಾರ್ಯಕ್ರಮ;</li>
<li>ಲಕ್ಷ್ಯ ಕಾರ್ಯಕ್ರಮದ ಅನುಷ್ಠಾನ;</li>
<li>ಪ್ರಸೂತಿ ತೀವ್ರ ನಿಗಾ ಘಟಕಗಳು;</li>
<li>ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ನಿರ್ಮಾಣ;</li>
<li>FRUsಗಳ ಬಲಪಡಿಸುವಿಕೆ;</li>
<li>ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ;</li>
<li>ವಿಸ್ತೂತ ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ;</li>
<li>ದಕ್ಷತಾ ಕೌಶಲ್ಯ ತರಬೇತಿ;</li>
</ol>
ತಾಲ್ಲೂಕು ಮಟ್ಟದ ಆಸ್ಪತ್ರೆಗೆ ಬರುವ ಮಹಿಳೆಯರು, ಮಕ್ಕಳು ಹಾಗೂ ಸಾರ್ವಜನಿಕರಿಗೆ ಗುಣಮಟ್ಟದ ಮತ್ತು ಸುವ್ಯವಸ್ಥಿತ ಆರೋಗ್ಯ ಸೇವಾ ಸೌಲಭ್ಯಗಳು ಈ ಕೆಳಕಂಡಂತಿದೆ.-
<ol>
<li>ರಾಜ್ಯದ ಎಲ್ಲಾ ತಾಲ್ಲೂಕುಗಳ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳ ಆರೈಕೆಗೆ ಸಂಬಂಧಪಟ್ಟಂತೆ, ನವಜಾತ ಶಿಶು ಸ್ಥಿರೀಕರಣ ಘಟಕಗಳನ್ನು (New Born Stabilization Unit-ಎನ್.ಬಿ.ಎಸ್</li>
</ol>
</td>
</tr>
</table>

| | | |
|---|---|---|
| | | .ಯು.) ಸ್ಥಾಪಿಸಲಾಗಿದೆ.<br>2. ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿ NBSU ಕಾರ್ಯಾಚರಣೆಯ ವೆಚ್ಚ (Operational Cost) ವನ್ನು ವಾರ್ಷಿಕ ರೂ.30,000/- ರೂಗಳಿಂದ 2024-25ನೇ ಸಾಲಿನಲ್ಲಿ ರೂ.1.00 ಲಕ್ಷ ರೂಗಳಿಗೆ ಹೆಚ್ಚಿಸಲಾಗಿದೆ.<br>3. ತಾಲ್ಲೂಕು ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳ ಆರೈಕೆಗಾಗಿ ಸ್ಥಾಪಿಸಲಾದ ನವಜಾತ ಶಿಶುಸ್ಥಿರೀಕರಣ ಘಟಕಗಳಲ್ಲಿ (NBSU) ದಿನದ 24 ಘಂಟೆ ನವಜಾತ ಶಿಶುಗಳ ಆರೈಕೆಗಾಗಿ ಈ ಮೊದಲು ಕಾರ್ಯನಿರ್ವಹಿಸುತ್ತಿದ್ದ ಎರಡು ಶುಶ್ರೂಷಕರೊಂದಿಗೆ 2024-25ನೇ ಸಾಲಿನಲ್ಲಿ ಇನ್ನೂ ಎರಡು ಹೆಚ್ಚುವರಿ ಶುಶ್ರೂಷಕರುಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಮಂಜೂರಾತಿ ಮಾಡಲಾಗಿದೆ.<br>4. NBSU ಗಳಲ್ಲಿ ಸೇವೆ ನೀಡುತ್ತಿರುವ ಶುಶ್ರೂಷಕಿಯರಿಗೆ ನವಜಾತ ಶಿಶುಗಳ ವೈದ್ಯಕೀಯ ಸೇವೆಗಳನ್ನು ಬಲಪಡಿಸುವ ಸಂಬಂಧ ತರಬೇತಿಗಳನ್ನು ನೀಡಲಾಗಿದೆ.<br>5. ರಾಜ್ಯದಲ್ಲಿ ಹತ್ತು ತಾಲ್ಲೂಕಾ ಆಸ್ಪತ್ರೆಯ NBSU ಗಳನ್ನು ಕ್ಲಿಷ್ಟಕರ ವೈದ್ಯಕೀಯ ತೊಂದರೆಗಳಿಂದ ಬಳಲುತ್ತಿರುವ ನವಜಾತ ಶಿಶುಗಳಿಗೆ ಹೆಚ್ಚುವರಿ ಸೇವೆಗಳನ್ನು ನೀಡಲು ವಿಶೇಷ ನವಜಾತ ಶಿಶುಗಳ ಆರೈಕೆ ಘಟಕ (SNCU) ಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.<br>6. ತಾಲ್ಲೂಕ ಆಸ್ಪತ್ರೆಗಳಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವ ಒಂದು ವರ್ಷದೊಳಗಿನ ಶಿಶುಗಳಿಗೆ ಸಂಪೂರ್ಣ ಉಚಿತ ಚಿಕಿತ್ಸಾ ಸೌಲಭ್ಯ ನೀಡುವ ಸಂಬಂಧ ತುರ್ತು ಬಳಕೆಗಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನದ ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK) ಅಡಿಯಲ್ಲಿ ಬೇಡಿಕೆಗೆ ಅನುಗುಣವಾಗಿ ಅನುದಾನ ನೀಡಲಾಗುತ್ತಿದೆ.<br><br>ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK) ಕಾರ್ಯಕ್ರಮದಡಿ ಒಂದು ವರ್ಷದೊಳಗಿನ ಶಿಶುಗಳಿಗೆ ಆದ್ಯತೆಯ ಆರೈಕೆಗಾಗಿ ಮೇಲ್ದರ್ಜೆ ಆಸ್ಪತ್ರೆಗೆ ರೆಫರ್ ಮಾಡಿದಲ್ಲಿ ಉಚಿತ ರೆಫರಲ್ ಸೇವೆ ಮತ್ತು ಗುಣಮುಖರಾದ ಶಿಶುಗಳಿಗೆ ಮರಳಿ ಮನೆಗೆ ತಲುಪಿಸುವ ಸೇವೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ. |

(HFW/36/HSD/2024)

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅನುಬಂಧ - 1

| KOLAR DIST PHC WISE STAFF DETAILS LAQ-53 | | | | | |
|---|---|---|---|---|---|
| Sl.No | NAME OF THE POST | SAN | Working | vacant | REMARKS |
| 1 | Doctors | 66 | 49 | 17 | |
| 2 | F.D.A | 37 | 27 | 10 | |
| 3 | S.D.A | 17 | 11 | 6 | |
| 4 | Staff Nurse | 35 | 20 | 15 | |
| 5 | ANM | 256 | 94 | 162 | |
| 6 | LHV | 41 | 13 | 28 | |
| 7 | Se HIO | 31 | 2 | 29 | |
| 8 | HIO | 116 | 49 | 67 | |
| 9 | LAB Tech | 45 | 28 | 17 | |
| 10 | Se LAB Tech | 1 | 0 | 1 | |
| 11 | Se Pharmasist | 1 | 1 | 0 | |
| 12 | Pharmasist | 64 | 35 | 29 | |
| 13 | Drivers | 19 | 5 | 14 | |
| 14 | BHE | 16 | 7 | 9 | |
| 15 | Refractionist | 9 | 2 | 7 | |
| 16 | CCT | 8 | 0 | 8 | |
| 17 | Group D | 136 | 52 | 84 | |
| TOTAL | | 898 | 395 | 503 | |

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು, ಕೋಲಾರ

ಅನುಬಂಧ-2

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 57 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು/ಸಿಬ್ಬಂದಿಗಳ ವಿವರ

| ಹುದ್ದೆ | ಸಂಖ್ಯೆ | | | |
|---|---|---|---|---|
| | ಖಾಯಂ | ಗುತ್ತಿಗೆ | ಎನ್.ಹೆಚ್.ಎಂ | ಹೊರ ಗುತ್ತಿಗೆ |
| ವೈದ್ಯರು | 41 | 12 | 0 | 0 |
| ಶುಶ್ರೂಷಾಧಿಕಾರಿಗಳು | 27 | 0 | 49 | 0 |
| ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 11 | 0 | 0 | 0 |
| ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ | 7 | 0 | 0 | 0 |
| ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 88 | 0 | 34 | 0 |
| ಆರೋಗ್ಯ ನಿರೀಕ್ಷಣಾಧಿಕಾರಿ | 9 | 0 | 0 | 0 |
| ಫಾರ್ಮಾಸಿ ಅಧಿಕಾರಿ | 33 | 0 | 0 | 15 |
| ಪ್ರಯೋಗ ಶಾಲಾ ತಂತ್ರಜ್ಞರು | 21 | 0 | 13 | 27 |
| ನೇತ್ರಾಧಿಕಾರಿಗಳು | 5 | 0 | 0 | 0 |
| ಪ್ರಥಮ ದರ್ಜೆ ಸಹಾಯಕರು | 23 | 0 | 0 | 0 |
| ದ್ವಿತೀಯ ದರ್ಜೆ ಸಹಾಯಕರು | 12 | 0 | 0 | 0 |
| ವಾಹನ ಚಾಲಕರು | 4 | 0 | 0 | 17 |
| ಗ್ರೂಪ್ ಡಿ | 29 | 0 | 0 | 53 |
| **ಒಟ್ಟು** | **310** | **12** | **96** | **112** |